# ಕಾಣದ ಜೀವಿಯ ಆಟ



ಚಿತ್ರ: ಮಂಜುನಾಥ ಹುಲಕೊಪ್ಪದ

■ **ಶಾಲಿನಿ ನಾಯಕ್, ಬೆಂಗಳೂರು**

ಜಯಪುರ ಎಂಬ ಊರಿನಲ್ಲಿ ಜಯರಾಜ ಎಂಬ ಅರಸನಿದ್ದ. ಅವನಿಗೆ ಜಯದೇವ ಎಂಬ ಮಗನಿದ್ದನು. ಒಮ್ಮೆ ವಿವಿಧ ಕಾರಣಗಳಿಂದ ಜನರು ಕಾಯಿಲೆ ಪೀಡಿತರಾದರು. ಮಂತ್ರಿಯು ಈ ವಿಷಯವನ್ನು ರಾಜನಿಗೆ ತಿಳಿಸಿದನು. ಊರಿನಲ್ಲಿ ಸೊಳ್ಳೆ, ಇಲಿ, ಕ್ರಿಮಿಕೀಟಗಳು ಜಾಸ್ತಿಯಾಗಿವೆ. ಸಂಬಂಧಪಟ್ಟ ಜನರು ಕಸ ನಿರ್ವಹಣೆ ಸರಿಯಾಗಿ ಮಾಡುತ್ತಿಲ್ಲ. ನೀರು ಹರಿಯುವ ಮೋರಿಗಳು ಕಟ್ಟಿಕೊಂಡಿವೆ. ಜಲಮೂಲಗಳು ಮಲಿನಗೊಂಡಿವೆ. ಗಾಳಿ ವಿಷವಾಗುತ್ತಿದೆ. ಇತ್ತೀಚೆಗೆ ಅರಸರು ಊರು ಪರ್ಯಟಣೆಗೆ ಹೋಗಿಲ್ಲದ ಕಾರಣ ಇವೆಲ್ಲ ರಾಜರಿಗೆ ತಿಳಿದಿಲ್ಲ ಎಂದು ಮಂತ್ರಿ ಅರುಹಿದ.

ಅರಸನು ತನಗೆ ವಯಸ್ಸಾಗಿದೆ. ಈಗ ಮೊದಲಿನಂತೆ ಊರೆಲ್ಲ ಸುತ್ತಾಡಲು ಆಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಕೆಲಸ ಸರಿಯಾಗಿ ಮಾಡಬೇಕಲ್ಲವೇ? ಎಂದನು. ಮಂತ್ರಿ ರಾಜನಿಗೆ ಒಂದು ಸಲಹೆಯನ್ನು ಕೊಟ್ಟನು. ಅದರಂತೆ ಯುವರಾಜ ಜಯದೇವನಿಗೆ ಪಟ್ಟಾಭಿಷೇಕ ಮಾಡಿದರೆ ಆತನ ಮೇಲೆ ಊರಿನ ಜವಾಬ್ದಾರಿ ಬೀಳುತ್ತದೆ. ಆತ ಊರು ಪರ್ಯಟಣೆ ಮಾಡಿ ಸಂಬಂಧಪಟ್ಟ ಇಲಾಖೆಗಳು ಸರಿಯಾಗಿ ಕರ್ತವ್ಯ ನಿರ್ವಹಿಸುವಂತೆ ಮಾಡಿದರೆ ಎಲ್ಲವೂ ಸರಿಹೋಗುವುದು ಎಂದ. ಮಂತ್ರಿಯ ಮಾತಿನಂತೆ ಜಯದೇವನ ಪಟ್ಟಾಭಿಷೇಕ ನೆರವೇರಿತು.

ಜಯದೇವ ರಥವನ್ನೇರಿ ಹಾದಿ–ಬೀದಿ, ರಸ್ತೆಗಳನ್ನೆಲ್ಲ ಸುತ್ತಾಡಿದನು. ಸ್ವಚ್ಛತೆಯಿಂದಲೇ ಆರೋಗ್ಯ, ಆರೋಗ್ಯದಿಂದಲೇ ಏಳಿಗೆ, ಸಿರಿಸಂಪತ್ತು ಎಂದು ಘೋಷಿಸಿದನು. ಪ್ರಜೆಗಳೆಲ್ಲ ತಮ್ಮ ಮನೆ, ಪರಿಸರ ಸ್ವಚ್ಛವಾಗಿಡಬೇಕೆಂದೂ, ಮೂರು ತಿಂಗಳೊಳಗೆ ಜಯಪುರವು ಸುಂದರಪುರವಾಗಬೇಕೆಂದು ಡಂಗುರ ಹೊರಡಿಸಿದನು. ತಾನೇ ಮುಂದೆ ನಿಂತು ಸ್ವಚ್ಛತಾಕಾರ್ಯ ನೆರವೇರಿಸಿದನು. ಹೊಸರಾಜನ ಹೊಸ ಉಮೇದಿಗೆ ಮೊದಮೊದಲು ಜನರು ಸ್ಪಂದಿಸಿದರು. ತಮ್ಮ ತಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟರು. ಸಂಬಂಧಪಟ್ಟ ಇಲಾಖೆಗಳು ತಮ್ಮ ಕಾರ್ಯ ನೆರವೇರಿಸಿದವು. ಅಲ್ಲಲ್ಲಿ ತೋಟಗಳ ನಿರ್ಮಾಣ, ಕೆರೆಗಳ ಶುದ್ಧೀಕರಣ ನಡೆಯಿತು. ರಾಜನು ಸಂತೋಷಗೊಂಡು ಅರಮನೆಯಲ್ಲಿ ವಿರಮಿಸಿದನು.

ಕೆಲವು ತಿಂಗಳ ಬಳಿಕ ಜನರಿಗೆ ಆಲಸ್ಯ ಶುರುವಾಯಿತು. ನಾನೊಬ್ಬ ಸ್ವಲ್ಪ ಕಸ ಹಾಕಿದರೇನು ಎಂದುಕೊಂಡು ಎಲ್ಲರೂ ಅಲ್ಲಲ್ಲಿ ಕಸ ಹಾಕತೊಡಗಿದರು. ಕಾರ್ಖಾನೆಗಳ ಮಾಲೀಕರು ಕಲುಷಿತ ನೀರನ್ನು ನದಿ, ಕೆರೆಗಳಿಗೆ ಬಿಡತೊಡಗಿದರು. ಕಳ್ಳದಾರಿಯಲ್ಲಿ ಸಂಪತ್ತು